ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	46
ಸದಸ್ಯರ ಹೆಸರು	ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	21-09-2020
ಉತ್ತರಿಸಬೇಕಾದ ಸಚಿವರು	ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
ಅ) ಬೀದರ್ ಜಿಲ್ಲೆಯಲ್ಲಿ ಸರ್ಕಾರದಿಂದ ಷರತ್ತುಬದ್ಧವಾದ ಪರವಾನಗಿ ಪಡೆದು ಯಾವುದೇ ಮೂಲಭೂತವಾದ ಸವಲತ್ತು ನೀಡದೇ ತಗಡಿನ ಶೆಡ್ಡಿನಲ್ಲಿ ಮಕ್ಕಳಿಗೆ ಪಾಠ ಬೋಧನೆ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು; [ಆ ಸಂಸ್ಥೆಗಳ ಹೆಸರುಗಳನ್ನು ನೀಡುವುದು] ಅವುಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮವೇನು;	ಬೀದರ್ ಜಿಲ್ಲೆಯಲ್ಲಿ ಷರತ್ತು ಬದ್ಧವಾದ ಪರವಾನಿಗೆ ಪಡೆದು ಯಾವುದೇ ಮೂಲಭೂತವಾದ ಸವಲತ್ತು ನೀಡದೇ ತಗಡಿನ ಶೆಡ್ಡಿನಲ್ಲಿ ಮಕ್ಕಳಿಗೆ ಪಾಠ ಭೋಧನೆ ಮಾಡುತ್ತಿರುವ ಈ ಕೆಳಕಂಡ ಶಾಲೆಗಳು ಗಮನಕ್ಕೆ ಬಂದಿವೆ :- 1) ಇನ್ಫಂಟ್ ಜೀಸಸ್ ಹಿರಿಯ ಪ್ರಾಥಮಿಕ ಶಾಲೆ, ಯಾಕತಮರ ತಾಲ್ಲೂಕು, ಬೀದರ್ ಜಿಲ್ಲೆ. 2) ಸ್ವಾಮಿ ವಿವೇಕಾನಂದ ಹಿರಿಯ ಪ್ರಾಥಮಿಕ ಶಾಲೆ, ತೋರಣಾ ತಾಲ್ಲೂಕು, ಬೀದರ್ ಜಿಲ್ಲೆ. 3) ಸಿದ್ಧಮ್ಮ ಹಿರಿಯ ಪ್ರಾಥಮಿಕ ಶಾಲೆ, ಕಮಲನಗರ, ಔರಾದ, ಬೀದರ್ ಜಿಲ್ಲೆ. ಈ ಶಾಲೆಗಳ ವಿರುದ್ಧ ಕ್ರಮಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ : ಇಡಿ 587 ಪಿಜಿಸಿ 2018 ಬೆಂಗಳೂರು ದಿನಾಂಕ :19-11-2018ರಂತೆ ಅಂತಹ ಶಾಲೆಗಳ ಆಡಳಿತ ಮಂಡಳಿಯವರಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೊಂದಿರುವಂತೆ, ಇಲ್ಲದಿದ್ದಲ್ಲಿ ಮಾನ್ಯತೆ ನವೀಕರಣ ಮಾಡದಿರಲು ನೋಟೀಸ್ ಜಾರಿ ಮಾಡಲು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಲಾಗಿದೆ.
ಆ) ಅನಧಿಕೃತವಾಗಿ ನಡೆಯುತ್ತಿರುವ ಶಾಲೆಗಳ ವರದಿ ಡಿಡಿಪಿಐ ಕಛೇರಿಯಿಂದ ತಮಗೆ ಬಂದಿದೆಯೇ; ಬಂದಿದ್ದಲ್ಲಿ ಆ ಶಿಕ್ಷಣ ಸಂಸ್ಥೆಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮವೇನು; ಗಮನಕ್ಕೆ ಬರದಿದ್ದರೆ ಇದಕ್ಕೆ ಯಾರು ಹೊಣೆಗಾರರು;	ಬೀದರ್ ಜಿಲ್ಲೆಯ ಬೀದರ್ ತಾಲ್ಲೂಕಿನಲ್ಲಿ ಅನಧಿಕೃತವಾಗಿ 17 ಶಾಲೆಗಳು ನಡೆಯುತ್ತಿರುವುದು ಕಂಡುಬಂದಿದ್ದು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬೀದರ್ ಇವರು ಸದರಿ ಶಾಲೆಗಳನ್ನು ಮುಚ್ಚಿಸಿ ಅನಧಿಕೃತ ಶಾಲೆಗಳು ನಡೆಯುತ್ತಿಲ್ಲವೆಂದು ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ರವರಿಗೆ ವರದಿ ಮಾಡಿ ದೃಢೀಕರಣ ನೀಡಿರುತ್ತಾರೆ.

ಇ) ಒಂದು ಶಾಲೆ ಪರವಾನಗಿ ಪಡೆದು ಅನೇಕ ಶಾಲೆಗಳನ್ನು ನಡೆಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇಂತಹ ಪರವಾನಗಿ ಇಲ್ಲದ ಶಾಲೆಗಳ ವಿರುದ್ಧ ಏನು ಕ್ರಮ ಕೈಗೊಂಡಿದೆ; ಕೈಗೊಳ್ಳದಿದ್ದರೆ ಇಷ್ಟು ದಿವಸ ಸರ್ಕಾರ ಸುಮ್ಮನಿರಲು ಕಾರಣವೇನು;	ಇಲ್ಲ ಪ್ರಶ್ನೆ ಉದ್ಭವಿಸುವುದಿಲ್ಲ.

ಇಡಿ 109 ಪಿಎಂಸಿ 2020

S. S—

[ಎಸ್.ಸುರೇಶ್ ಕುಮಾರ್]
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು.